Government of Karnataka

Indo-Israel Agriculture Project (IIAP)
A Growing Partnership

Centre of Excellence for Vegetables, Dharwad

ತರಕಾರಿ ಬೆಳೆಗಳ ಉತ್ಕೃಷ್ಟ ಕೇಂದ್ರ
ಕುಂಬಾಪುರ ತೋಟಗಾರಿಕೆ ಕ್ಷೇತ್ರ, ಧಾರವಾಡ

ಪರಿಚಯ:

ಭಾರತ ದೇಶದ ಆರ್ಥಿಕತೆ ಹಾಗೂ ತಾಜಾ ಆಹಾರದಲ್ಲಿ ತರಕಾರಿಗಳ ಬೇಸಾಯ ಹಾಗೂ ಉತ್ಪಾದನೆ ಗಮನಾರ್ಹವಾದ ಪಾಲನ್ನು ಹೊಂದಿದೆ. ದೇಶದ ತರಕಾರಿ ಉತ್ಪಾದನೆ ಮುಖ್ಯವಾಗಿ ಹವಾಮಾನವನ್ನು ಅವಲಂಬಿಸಿದೆ ಇದರಿಂದಾಗಿ ತರಕಾರಿಗಳ ಬೆಲೆಗಳು ಕೂಡಾ ಏರಿಳಿತವಾಗುತ್ತವೆ. ತರಕಾರಿ ಬೇಸಾಯವನ್ನು ಒಂದು ಪ್ರಮುಖ ಆರ್ಥಿಕ ಚಟುವಟಿಕೆಯಾಗಿ ರೂಪಿಸುವದು ಇಂದಿನ ಆಧುನಿಕ ತಂತ್ರಜ್ಞಾನದ ಪ್ರಮುಖ ಸವಾಲಾಗಿದೆ. ನಿಖರ ಬೇಸಾಯ ತಾಂತ್ರಿಕತೆಯ ಮುಖ್ಯ ಉದ್ದೇಶ ತರಕಾರಿಗಳ ಬೆಳವಣಿಗೆಗೆ ಪೂರಕವಾದ ವಾತಾವರಣವನ್ನು ಸೃಜಿಸುವದಾಗಿದೆ. ಸಂರಕ್ಷಿತ ರಚನೆಗಳು ವಾತಾವರಣವನ್ನು ಬದಲಾವಣೆ ಮಾಡುವದಲ್ಲದೆ ಗಾಳಿ, ಮಳೆ ಹಾಗೂ ಕೀಟಗಳಿಂದ ರಕ್ಷಣೆಯನ್ನು ಒದಗಿಸುತ್ತವೆ.

ಸಂರಕ್ಷಿತ ರಚನೆಗಳಲ್ಲಿ ಬೇಸಾಯ ಉತ್ತಮ ಗುಣಮಟ್ಟ, ಉತ್ಪಾದಕತೆಯನ್ನು ಹೆಚ್ಚಿಸುವಲ್ಲಿ ನೆರವಾಗುವದಲ್ಲದೆ ಅಕಾಲಿಕ ವಾತಾವರಣಗಳಲ್ಲಿ ತರಕಾರಿ ಬೇಸಾಯವನ್ನು ಕೈಗೊಳ್ಳಲು ಅನುವಾಗುತ್ತವೆ. ಇದರಿಂದಾಗಿ ಹೆಚ್ಚಿನ ಲಾಭವನ್ನು ಪಡೆಯಲು ನೆರವಾಗುತ್ತದೆ. ಆದಾಗ್ಯೂ ಸಂರಕ್ಷಿತ ಬೇಸಾಯ ಹೆಚ್ಚಿನ ಪರಿಕರಗಳ ವೆಚ್ಚವನ್ನು ಮತ್ತು ಉತ್ತಮ ನಿರ್ವಹಣಾ ಕ್ರಮಗಳನ್ನು ಬಯಸುತ್ತದೆ.

ಕರ್ನಾಟಕ ರಾಜ್ಯದಲ್ಲಿ ಸುಮಾರು 4.03 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ತರಕಾರಿ ಬೆಳೆಯಲಾಗುತ್ತಿದ್ದು, ಇದರಿಂದಾಗಿ ವಾರ್ಷಿಕ 72.20 ಲಕ್ಷ ಮೆಟ್ರಿಕ್ ಟನ್ ತರಕಾರಿ ಉತ್ಪಾದನೆಯಾಗುತ್ತಿದೆ.

ಉಷ್ಣವಲಯಕ್ಕೆ ಸೇರಿದ ಕರ್ನಾಟಕದಲ್ಲಿ ತರಕಾರಿ ಬೆಳಗಳನ್ನು ವಾಣಿಜ್ಯ ಪ್ರಮಾಣದಲ್ಲಿ ವಿಸ್ತಾರವಾದ ಪ್ರದೇಶದಲ್ಲಿ ಬೆಳೆಯಲಾಗುತ್ತಿದ್ದರೂ, ತರಕಾರಿ ಬೆಳೆಗಳ ಬೇಸಾಯವು ಹಲವಾರು ತೀವ್ರ ಪ್ರಕಾರದ ತೊಂದರೆಗಳನ್ನು ಎದುರಿಸುತ್ತಿದೆ. ಅಲ್ಲದೆ, ಇದನ್ನು ಇನ್ನೂ ಹೆಚ್ಚಿನ ವೈಜ್ಞಾನಿಕ ರೀತಿಯಲ್ಲಿ ಬೆಳೆಯುವುದರ ಅವಶ್ಯಕತೆ ಇರುತ್ತದೆ. ಈ ಕಾರಣಗಳಿಂದಾಗಿ ತರಕಾರಿ ಬೆಳೆಗಾರರು ಅನೇಕ ತೊಂದರೆಗಳನ್ನು ಅನುಭವಿಸುತ್ತಿರುವುದು ತೋಟಗಾರಿಕೆ ಇಲಾಖೆಯ ಗಮನಕ್ಕೆ ಬಂದ ಕಾರಣ ಈ ದಿಸೆಯಲ್ಲಿ ತರಕಾರಿ ಬೆಳೆಗಾರರಿಗೆ ಹೆಚ್ಚಿನ ತಂತ್ರಜ್ಞಾನವನ್ನು ಒದಗಿಸಿ ತರಕಾರಿ ಬೇಸಾಯವನ್ನು ಯಶಸ್ವಿಗೊಳಿಸುವುದರ ಅವಶ್ಯಕತೆ ಇದೆ. ಈ ಅಂಶಗಳನ್ನು ಮನಗಂಡು ತರಕಾರಿ ಬೇಸಾಯದಲ್ಲಿ ಅದರಲ್ಲೂ ಸಂರಕ್ಷಿತ ತರಕಾರಿ ಬೇಸಾಯದಲ್ಲಿ ಉನ್ನತ ತಂತ್ರಜ್ಞಾನ ಹೊಂದಿರುವ ಇಸ್ರೇಲ್ ದೇಶದ ಸಹಬಾಗಿತ್ವದಲ್ಲಿ ಸ್ಥಳೀಯ ಪರಿಸ್ಥಿತಿಗೆ ಅನುಗುಣವಾಗಿ ತಾಂತ್ರಿಕತೆ ಅಭಿವೃದ್ಧಿಪಡಿಸಿ, ಬೆಳೆಗಾರರ ಹಿತರಕ್ಷಣೆ ಕಾಪಾಡುವ ನಿಟ್ಟಿನಲ್ಲಿ ತರಕಾರಿ ಉತ್ಕೃಷ್ಟ ಕೇಂದ್ರವನ್ನು ಕರ್ನಾಟಕದ ಧಾರವಾಡದಲ್ಲಿ 2013–14 ನೇ ಸಾಲಿನಲ್ಲಿ ಕುಂಬಾಪೂರ ತೋಟಗಾರಿಕೆ ಕ್ಷೇತ್ರದಲ್ಲಿ 20 ಎಕರೆ ಪ್ರದೇಶದಲ್ಲಿ ಸ್ಥಾಪಿಸಲಾಗಿದೆ.

ಉತ್ಕೃಷ್ಟ ಕೇಂದ್ರದ ಪ್ರಮುಖ ಉದ್ದೇಶಗಳು:

ಸದರಿ ತರಕಾರಿ ಉತ್ಕೃಷ್ಟ ಕೇಂದ್ರದ ಪ್ರಮುಖ ಉದ್ದೇಶಗಳು ಈ ಕೆಳಕಂಡಂತಿವೆ.

- ಉತ್ತಮ ಗುಣಮಟ್ಟದ ರೋಗಮುಕ್ತ ತರಕಾರಿ ಸಸಿಗಳನ್ನು ಉತ್ಪಾದನೆ ಮಾಡಿ ರೈತರಿಗೆ ಒದಗಿಸುವುದು.
- ಇಸೇಲ್ ತಂತ್ರಜ್ಞಾನ ಮಾದರಿಯಲ್ಲಿ ಸಂರಕ್ಷಿತ ರಚನೆಗಳಲ್ಲಿ ತರಕಾರಿ ಬೇಸಾಯದ ಪ್ರಾತ್ಯಕ್ಷತೆಗಳನ್ನು ಕೇಂದ್ರದ ಆವರಣದಲ್ಲಿ ಕೈಗೊಳ್ಳುವುದು.

- ಇಸ್ರೇಲ್ ತಂತ್ರಜ್ಞಾನ ಮಾದರಿಯಲ್ಲಿ ನೀರು ಮತ್ತು ಪೋಷಕಾಂಶ ಪದ್ದತಿಯ ಪ್ರಾತ್ಯಕ್ಷತೆಗಳನ್ನು ಕೇಂದ್ರದ ಆವರಣದಲ್ಲಿ ಕೈಗೊಳ್ಳುವುದು.
- ಇಸ್ರೇಲ್ ತಾಂತ್ರಿಕತೆಗಳನ್ನು ಉಪಯೋಗಿಸಿ ನಿಖರ ಬೇಸಾಯ ಪದ್ಧತಿಗಳಲ್ಲಿ ತೆರೆದ ಕ್ಷೇತ್ರಗಳಲ್ಲಿ ತರಕಾರಿ ಪ್ರಾತ್ಯಕ್ಷಿತೆಗಳನ್ನು ಹಮ್ಮಿಕೊಳ್ಳುವದು.
- ಆಸಕ್ತ ರೈತರಿಗೆ ಹಾಗೂ ಉದ್ಯಮಿಗಳಿಗೆ ಸುಧಾರಿತ ತರಕಾರಿ ಬೇಸಾಯ ಮತ್ತು ಕೋಯ್ಲೋತ್ತರ ನಿರ್ವಹಣೆ ಕುರಿತು ಅಗತ್ಯ ತಂತ್ರಜ್ಞಾನದ ಮಾಹಿತಿ ನೀಡುವ ಸಲುವಾಗಿ ವಸತಿ ಸಹಿತ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.

<u>ತರಕಾರಿ ಉತ್ಕೃಷ್ಟ ಕೇಂದ್ರದ ವಿವರಗಳು:</u>

ಸದರಿ ಕೇಂದ್ರವನ್ನು ಕರ್ನಾಟಕ ರಾಜ್ಯದ ಧಾರವಾಡ ಪಟ್ಟಣದ ಕುಂಬಾಪೂರ ತೋಟಗಾರಿಕೆ ಕ್ಷೇತ್ರದಲ್ಲಿ 20 ಎಕರೆ ಪ್ರದೇಶದಲ್ಲಿ ನೆಲೆಗೊಳಿಸಲಾಗಿದೆ. ಈ ಕೇಂದ್ರದಲ್ಲಿ ಕೈಗೆತ್ತಿಕೊಳ್ಳಲಾದ ವಿವಿಧ ಮೂಲಭೂತ ಸೌಕರ್ಯಗಳು ಮತ್ತು ಪ್ರಾತ್ಯಕ್ಷತೆ ತಾಕುಗಳ ವಿವರಗಳನ್ನು ಈ ಕೆಳಗೆ ಕಾಣಿಸಲಾಗಿದೆ.

1. ಉತ್ತಮ ಗುಣಮಟ್ಟದ ರೋಗಮುಕ್ತ ತರಕಾರಿ ಸಸಿಗಳನ್ನು ಉತ್ಪಾದನೆಮಾಡಿ ರೈತರಿಗೆ ಒದಗಿಸಲು ಮೂಲಭೂತವಾಗಿ ಅಗತ್ಯವಿರುವ ಹೈಟಕ್ ಪಾಲಿಹೌಸನ್ನು 1500 ಚ.ಮೀ ವಿಸ್ತೀರ್ಣದಲ್ಲಿ ನಿರ್ಮಿಸಲಾಗಿದೆ. ಸದರಿ ಸಂರಕ್ಷಿತ ರಚನೆಯು ಕೂಲಿಂಗ್ ಪ್ಯಾಡ್, ಫ್ಯಾನ್, ಬೆಂಚಿಸ್, ಫಾಗರ್ಸ್ ಹಾಗೂ ಬೂಮರ್‌ಗಳನ್ನು ಒಳಗೊಂಡಿದೆ. ಇಲ್ಲಿ ತರಕಾರಿ ಸಸಿಗಳನ್ನು ಕೊಕೋಪೀಟ, ವರ್ಮಿಕ್ಯುಲೈಟ್ ಮತ್ತು ಪರ್ಲೈಟ್ ಮಾದ್ಯಮಗಳಲ್ಲಿ ಉತ್ಪಾದಿಸಲಾಗುತ್ತದೆ. ಈ ರಚನೆಯಲ್ಲಿ ತರಕಾರಿ ಸಸಿಗಳನ್ನು ಸದಾಕಾಲವೂ ಸಂಪೂರ್ಣ ರೋಗ/ಕೀಟ ರಹಿತ ಸ್ಥಿತಿಯಲ್ಲಿ ನಿರ್ವಹಿಸಲಾಗುವುದು.
2. ಈ ಘಟಕದ ವಾರ್ಷಿಕ ಸಸ್ಯೋತ್ಪಾದನಾ ಸಾಮರ್ಥ್ಯವು 25 ಲಕ್ಷ ಸಸಿಗಳು.
3. ಇಸೇಲ್ ತಂತ್ರಜ್ಞಾನ ಮಾದರಿಯಲ್ಲಿ ಸಂರಕ್ಷಿತ ರಚನೆಗಳಾದ ನೈಸರ್ಗಿಕ ಪಾಲಿಹೌಸ್, ಕೀಟ ನಿರೋಧಕ ನೆರಳು ಪರದೆ ಮನೆ ಹಾಗೂ ವಾಕಿಂಗ್ ಟನಲ್ ಗಳಲ್ಲಿ ವಿವಿಧ ತರಕಾರಿಗಳಾದ ಬಣದ ಮೆಣಸಿನಕಾಯಿ, ಟೊಮೆಟೊ, ಇರೊಪಿಯನ್ ಸವತೆ, ಹಸಿ ಮೆಣಸಿನಕಾಯಿ, ಬದನೆ, ಲೆಟ್ಯೂಸ್ ಇತ್ಯಾದಿ ತರಕಾರಿಗಳ ಪ್ರಾತ್ಯಕ್ಷಿತೆಯನ್ನು ಹಮ್ಮಿಕೊಳಲಾಗಿದೆ.
4. ಕೇಂದ್ರದಲ್ಲಿ ನಿರ್ಮಿಸಿದ ಸಂರಕ್ಷಿತ ರಚನೆಗಳ ವಿವರ:
    1) ನೈಸರ್ಗಿಕವಾಗಿ ಗಾಳಿಯಾಡುವ ಪಾಲಿಹೌಸ್: 1200 ಚ.ಮೀಟರ್ ಅಳತೆಯ ಎರಡು ರಚನೆಗಳು
    2) ಕೀಟನಿರೋಧಕ ನೆರಳು ಮನೆ: 100 ಚ,ಮೀಟರ್ ಅಳತೆಯ ಎರಡು ರಚನೆಗಳು
    3) ವಾಕಿನ್ ಟನಲ್‌ಗಳು: 264 ಚ.ಮೀಟರ್ ಅಳತೆಯ ನಾಲ್ಕು ರಚನೆಗಳು
    4) ಹೈಟೆಕ್ ಹಸಿರುಮನೆ: 1500 ಚ.ಮೀಟರ್ ಅಳತೆಯ ಒಂದು ರಚನೆ
5. <u>ನಿಖರ ಬೇಸಾಯ ಪದ್ಧತಿಯಲ್ಲಿ ತೆರೆದ ಕ್ಷೇತ್ರದಲ್ಲಿ ತರಕಾರಿ ಪ್ರಾತ್ಯಕ್ಷತೆ</u>:–ಏರು ಮಡಿ, ಹನಿ ನೀರಾವರಿ, ಮಲ್ಚಿಂಗ್ ಹಾಗೂ ರಸಾವರಿ ತಾಂತ್ರಿಕತೆಗಳನ್ನು ಉಪಯೋಗಿಸಿ ವಿವಿಧ ತರಕಾರಿಗಳಾದ ಬದನೆ, ಟೊಮ್ಯಾಟೊ, ಬೆಂಡಿ ಹಸಿಮೆಣಸಿನಕಾಯಿ, ಎಲೆಕೋಸು ಹೂಕೋಸು ಇತ್ಯಾದಿಗಳ ಪ್ರಾತ್ಯಕ್ಷತೆ ತಾಕುಗಳನ್ನು ಸಜ್ಜುಗೊಳಿಸಲಾಗಿದೆ.
6. ಇಸ್ರೇಲ್ ತಂತ್ರಜ್ಞಾನ ಮಾದರಿಯಲ್ಲಿ ನೀರು ಮತ್ತು ಪೋಷಕಾಂಶ ಪದ್ದತಿಯ ಪ್ರಾತ್ಯಕ್ಷತೆಗಳನ್ನು ಕೇಂದ್ರದ ಆವರಣದಲ್ಲಿ ನಿರ್ಮಿಸಲಾಗಿದ್ದು, ಇದಕ್ಕಾಗಿ ಅಗತ್ಯವಿರುವ ಕೊಳವೆಬಾವಿ, ನೀರಿನ ತೊಟ್ಟಿ, ರಸಾವರಿ ಘಟಕ (ಂಣಾಂಟಚಿಣಜಜ ಈಜಡಿಣಾಂಚಿಣಾಂಟಿ ಗಟಿಣಾ), ಇತ್ಯಾದಿಗಳನ್ನು ಒದಗಿಸಲಾಗಿದೆ. ಸದರಿ ಪ್ರಾತ್ಯಕ್ಷತೆ

ಮೂಲಕ ಸಂರಕ್ಷಿತ ರಚನೆಗಳಲ್ಲಿ ತರಕಾರಿಗಳ ಬೆಳವಣಿಗೆಗೆ ಅಗತ್ಯವಿರುವ ಪ್ರಮಾಣದಲ್ಲಿ ಮತ್ತು ಮಣ್ಣು/ವಾತಾವರಣದ ತೇವಾಂಶವನ್ನು ಆದರಿಸಿ ಕಾಲಕಾಲಕ್ಕೆ ತಂತಾನೆ ನೀರು ಮತ್ತು

ಪೋಷಕಾಂಶಗಳನ್ನು ಹರಿಸುವ ಪದ್ದತಿಯನ್ನು ರೈತರಿಗೆ ತೋರಿಸಲಾಗುವುದು. ತನ್ಮೂಲಕ ನೀರು ಮತ್ತು ಪೋಷಕಾಂಶಗಳು ಪೋಲಾಗುವುದನ್ನು ತಡೆಗಟ್ಟುವ ಕುರಿತು ರೈತರಿಗೆ ಮನದಟ್ಟು ಮಾಡುವ ಪ್ರಯತ್ನ ಇದಾಗಿರುತ್ತದೆ.

7. ಇಂತಹುದೆ ಪ್ರಾತ್ಯಕ್ಷತೆಗಳನ್ನು ರೈತರ ತಾಕುಗಳಲ್ಲೂ ಸಹಾ ಏರ್ಪಡಿಸಿ, ತನ್ಮೂಲಕ ಆಯಾ ಭಾಗದ ರೈತರಿಗೆ ಮೇಲ್ಕಾಣಿಸಿದ ತಂತ್ರಜ್ಞಾನಗಳ ಪ್ರಯೋಜನಗಳನ್ನು ಅರಿಯುವಂತೆ ಮಾಡುವ ಪ್ರಯತ್ನ ಇದಾಗಿರುತ್ತದೆ.
8. ಆಸಕ್ತ ರೈತರಿಗೆ ಹಾಗೂ ಉದ್ಯಮಿಗಳಿಗೆ ಸುಧಾರಿತ ತರಕಾರಿ ಬೇಸಾಯ ಮತ್ತು ಕೋಯ್ಲೋತ್ತರ ನಿರ್ವಹಣೆ ಕುರಿತು ಅಗತ್ಯ ತಂತ್ರಜ್ಞಾನದ ಮಾಹಿತಿ ನೀಡುವ ಸಲುವಾಗಿ ವಸತಿ ಸಹಿತ ತರಬೇತಿ ಕಾರ್ಯಕ್ರಮಗಳನ್ನು ರೂಪಿಸಲಾಗಿದೆ. ಇದಕ್ಕಾಗಿ ಕೇಂದ್ರದ ವಿವಿಧ ಘಟಕಗಳಲ್ಲಿ ಕೈಗೆತ್ತಿಕೊಂಡಿರುವ ತಂತ್ರಜ್ಞಾನ ಪ್ರಸರಣ ಪ್ರಕ್ರಿಯೆಗಳನ್ನು ತೋರಿಸಿ, ವಿವರಿಸಿ ಅವರ ತಾಂತ್ರಿಕ ಸಾಮರ್ಥ್ಯವನ್ನು ಎತ್ತರಿಸುವ ಪ್ರಯತ್ನ ಇದಾಗಿರುತ್ತದೆ. ಇದಕ್ಕಾಗಿ ತರಬೇತಿಗಾಗಿ ಆಗಮಿಸುವ ರೈತರ ಅಗತ್ಯತೆಗಾಗಿ ಸುಸಜ್ಜಿತ ವಸತಿಗೃಹ, ಭೋಜನ ಗೃಹ ಮತ್ತು ಭೋದನಾ ಕೊಠಡಿ ಸೌಕರ್ಯಗಳನ್ನು ನಿರ್ಮಿಸಲಾಗಿದೆ. ಇದುವರೆಗೂ 500 ರೈತರು 20 ಅಧಿಕಾರಿಗಳಿಗೆ ತರಬೇತಿ ನೀಡಲಾಗಿದೆ.
9. ಉತ್ಕೃಷ್ಟ ಕೇಂದ್ರದಲ್ಲಿ ಕೃಷಿ ಹೊಂಡ, ದನದ ಕೊಟ್ಟಿಗೆ, ಬಯೋ ಡೈಜೆಸರ್ ಅನ್ನು ನಿರ್ಮಾಣ ಮಾಡಲಾಗುತ್ತಿದೆ.
10. Gazebo and hydrophonics ಘಟಕ ಪ್ರಗತಿಯ ಹಂತದಲ್ಲಿ ಇರುತ್ತದೆ.
11. ತೆರೆದ ಪ್ರದೇಶದಲ್ಲಿ Weather Station ಅನ್ನು ಅಳವಡಿಸಲಾಗಿದೆ.
12. ಗೋಡಂಬಿ ತಾಕಿಗೆ ಬೋರ್ ವೆಲ್ ನಿಂದ ಪೈಪ್ ಲೈನ್ ಅಳವಡಿಕೆ ಮಾಡಲಾಗಿದೆ.

Introduction class taken by Project officer CoE

Class about the organic farming



Class about nematode management in vegetables

Skill development programme

ಕೌಶಲ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮ

ಉತ್ಕೃಷ್ಟ ಕೇಂದ್ರದಲ್ಲಿ ನಡೆದ ರೈತರಿಗೆ ಮತ್ತು ಅಧಿಕಾರಿಗಳಿಗೆ ತರಕಾರಿ ಸಂರಕ್ಷಿತ ಬೇಸಾಯ ಕುರಿತು 02 ದಿನಗಳ ತರಬೇತಿ

ಕಲಘಟಗಿ ರೈತರಿಗೆ ಹಾಗೂ ಬಾಗಲಕೋಟ ತೋಟಗಾರಿಕೆ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಂದ ಕೇಂದ್ರಕ್ಕೆ ಭೇಟಿ

<u>ಇಸ್ರೇಲಿ ವಿಜ್ಞಾನಿಯಿಂದ ಕೇಂದ್ರದ ಬೇಟಿ</u>

<u>ಇಲಾಖಾ ಹಿರಿಯ ಅಧಿಕಾರಿಗಳಿಂದ ಕೇಂದ್ರಕ್ಕೆ ಬೇಟಿ</u>